ಎಂ.ಟಿ. ರಮಾನಂದ ರೆಡ್ಡಿ, ಮದಕರಿಪುರ

ನಿಯತ್ತಿಗೆ ನಾಯಿ, ಭಾರ ಹೊರುವುದಕ್ಕೆ ಕತ್ತೆ ಮತ್ತು ಪ್ರಾಣವನ್ನು ಪಕ್ಷಿಗೆ ಹೋಲಿಸುತ್ತಾರಲ್ಲಾ?



ಮನುಷ್ಯರಲ್ಲಿ ಕಾಣದ ಗುಣಗಳನ್ನು ಪ್ರಾಣಿಪಕ್ಷಿಗಳಲ್ಲೇ ಹುಡುಕಬೇಕಲ್ಲ!

ಮಂಡಿ ಕುಮಾರ್, ಬೆಂಗಳೂರು

ಜಾತಿ ಹುಟ್ಟಿದ್ದು ಯಾರಿಂದ?

ವೃತ್ತಿಗೆ ಬದ್ಧರಾದವರಿಂದ.

ಅನಸೂಯ ಟಿ. ಕೇದಿಗೆಮನೆ

ಹಿತಶತ್ರು ಎಂದರೆ ಯಾರು?

ಸೆಕೆಂಡ್ ಗ್ರೇಡ್ ಮಾಲು ಕೊಡಿಸಿ ಫಸ್ಟ್ ಕ್ಲಾಸ್ ತಮಾಷೆ ನೋಡುವವರು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ಮನುಷ್ಯ ಶಿಸ್ತನ್ನು ಕಲಿಯದಿದ್ದರೆ ಏನಾಗುತ್ತದೆ?

ಅಪ್ಪರಿಗೆ ಹೆಚ್ಚುworry ಸುಸ್ತು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಹಣಕ್ಕೂ, ಸಮಯಕ್ಕೂ ಎಷ್ಟು ದೂರ?



ಭುವಿಗಗನದಷ್ಟು. ಕೋಟಿ ರೂಪಾಯಿಯೂ ಕಳೆದ ಒಂದು ಕ್ಷಣಕ್ಕೆ ಸಮವಲ್ಲ.

ಪಿ.ಜೆ. ರಾಘವೇಂದ್ರ, ಮೈಸೂರು

ತಮ್ಮನ್ನು ತಾವು ಬೃಹಸ್ಪತಿಗಳು ಎಂದುಕೊಂಡಿದ್ದಾರಾ ಸುದ್ದಿ ಓದುವವರು?

ಇಲ್ಲ. ಬೃಹಸ್ಪತಿ ನನ್ನ ಸ್ಟೂಡೆಂಟ್ ಎಂದನಂತೆ ಸುದ್ದಿರಂಗ ಪ್ರವೀಣ.

ಸ್ವಾತಿ ಎಂ.ಎಸ್. ಗೌರಿಬಿದನೂರು

ತಿಥಿಯಲ್ಲಿ ಕಡ್ಡಾಯವಾಗಿ ಉದ್ದಿನ ವಡೆ ಮಾಡುವುದೇಕೆ?

ಎಣ್ಣೆ ಸಹವಾಸ ಮಾಡಿದರೆ ಮೊದಮೊದಲು ಗರಿಗರಿ, ಕಡೆಗೆ ಮ್ಯಾಮ್ಯಾ ಆಗಿಬಿಡುತ್ತೇವೆಂದು ಸೂಚಿಸಲು.

ಟೈಲರ್ ಮೋಹನ್, ಬೆಂಗಳೂರು

ನಾಯಿ ಕಚ್ಚಿದರೆ ಇಂಜೆಕ್ಷನ್. ಹೆಂಡತಿ ಕಚ್ಚಿದರೆ?

ಋಷಿ ಪಡಿ. ಪ್ರಸವವೇದನೆ ತಡೆಯಲಾರದೆ ಹಲ್ಲುಕಚ್ಚಿದಾಗ ನಿಮ್ಮ ಬೆರಳು ಅಡ್ಡವಿದ್ದಿತಷ್ಟೆ.

ದೀಪಕ್ ಘಾಟಿ, ಬೆಂಗಳೂರು

ವಾನಪ್ರಸ್ಥಾಶ್ರಮ ಸ್ವೀಕರಿಸಲು ಎಲ್ಲಿಗೆ ಹೋಗಬೇಕು?

ವಾನ(ಮಳೆ)ಯಲ್ಲೇ ಪ್ರಸ್ಥ(ಓಡಾಟ) ಹೆಚ್ಚಾಗಿ ಕಂಡುಬರುವ ತೆಲುಗು ಫಿಲ್ಮ್ ಲ್ಯಾಂಡ್‌ಗೆ.

ಆರ್. ಮಧುಸೂದನ್, ಹಾಸನ

ರಾಸಲೀಲೆಯ ಸಂಚನ್ನು ಹನಿಟ್ರ್ಯಾಪ್ ಎನ್ನುವುದೇಕೆ?

ಜೇನುಗೂಡನ್ನು ಇಟ್ಟವರೇ ಜೇನು ಹೆಕ್ಕಿ ರಾಣಿಜೇನಿಗೆ ಹೊಗೆ ಹಾಕುವುದರಿಂದ.

ಹರಿತಸ, ಬೆಂಗಳೂರು

ಪಕ್ಕದ ಮನೆಯವರು ತಮ್ಮ ಮಗನಿಗೆ ದುಶ್ಶಾಸನ ಎಂದು ಹೆಸರಿಟ್ಟಿದ್ದಾರಲ್ಲಾ...?

ಶಾಸನಗಳಲ್ಲಿ ದುಷ್ಟತನವನ್ನು ಬಯಲಿಗೆಳೆಯುವ ಅಡ್ವೊಕೇಟ್ ಆಗಲೆಂಬ ಆಶಯವಂತೆ.

ಜೆ.ಆರ್. ಆದಿನಾರಾಯಣಮುನಿ, ಬೆಂಗಳೂರು

ಸಂಬಂಧಗಳ ತಾಜಾತನವನ್ನು ಕಾಪಾಡುವುದು ಹೇಗೆ?

ಅನಗತ್ಯವಾಗಿ ನೀಡದೆ, ಬೇಡದೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ಇಲ್ಲೊಬ್ಬ ಈಗ ಕೊರೊನಾ ಇದೆ, ಮದುವೆ ಬೇಡ ಅಂತಿದ್ದಾನಲ್ಲಾ...?

ಅಪರೂಪದ ವಿವೇಕಶಾಲಿ. ಕೊರೊನಾ ಕಳೆದಮೇಲೆ ಭರ್ಜರಿ ಸನ್ಮಾನದೊಂದಿಗೆ ಹೆಣ್ಣು ಕೊಡಿ.

ಮಹಾವೀರ ಕಾಸರ, ಶಿವಮೊಗ್ಗ

ಕಾನೂನು ಮತ್ತು ಸುವ್ಯವಸ್ಥೆಗೆ ಇರುವ ವ್ಯತ್ಯಾಸವೇನು?

ಕಾನೂನು ಚೌಕಟ್ಟು; ಸುವ್ಯವಸ್ಥೆ ಅದರೊಳಗಿರುವ ಸ್ಪಷ್ಟ ಚಿತ್ರ.

## ಬಹುಮಾನಿತ ಪ್ರಶ್ನೆ

ನಾಗೇಂದ್ರ ಗಂಗೊಳ್ಳಿ, ಬೆಂಗಳೂರು

ಹೆಂಡತಿ ಪಕ್ಕದಲ್ಲೇ ಇದ್ದರೂ ಎಲ್ಲಿರುವೆ ಮನವ ಕಾಡುವ ಪ್ರೇಯಸಿಯೆ ಎಂದು ಹಾಡುವರಲ್ಲ?

ತಿಳಿಯಿತು. ಪ್ರೇಯಸಿಯ ವಿಷಯದಲ್ಲಿ ನಿಮ್ಮದು ಇರುವೆಯಷ್ಟೇ ಜ್ಞಾನ; ಇನ್ನೂ ಎಲ್ ಬೋರ್ಡ್!

ಎಸ್ಸೆನ್ ಮಹಾಬಲರಾವ್, ಎನ್ನಾರ್‍ಪುರ

ಕೆಟ್ಟ ತಾಯಿಯೂ ಇರುವಳೇ?

ಕುಲಗೆಡಿಸುವ ತಂದೆಯರಿರುವಾಗ ಅದು ಅಚ್ಚರಿಯೇನಲ್ಲ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಕತ್ತಲಲ್ಲೂ ಕಾಣುವ ಕಣ್ಣು ಯಾವುದು?

ಹಿಡನ್ ಕ್ಯಾಮರಾದು ಎಂದಳಂತೆ ಸಿ.ಡಿ. ಲೇಡಿ.

ಖಾದ್ರಿ ಪ್ರಮೀಳ, ಮೇಲುಕೋಟೆ

ರೇಡಿಯೊ ಜಾಕಿಗಳು ತಮಗೆ ತಾವೇ ಬಿರುದು ಕೊಟ್ಟುಕೊಳ್ಳುವುದೇಕೆ?



ಅವರವರ ಯೋಗ್ಯತೆ ಅವರವರಿಗೇ ಗೊತ್ತು ಎಂಬ ಧೋರಣೆಯಂತೆ.

ಕೆ.ವಿ. ಗೋವಿಂದಾಚಾರಿ, ಮೈಸೂರು

ಸೋಂಕಿತರು ಸಾಮಾನ್ಯರಾದರೆ ಗುಣಮುಖರಾದರು; ಕೆಲವು ರಾಜಕಾರಣಿಗಳಾದರೆ ಗೆದ್ದುಬಂದರು. ಏನಿದರ ಅರ್ಥ?

ಗುಣವೇ ಇಲ್ಲದವರಿಗೆ ಗುಣಮುಖರಾದರು ಎನ್ನುವುದು ಅವಮಾನಿಸಿದಂತೆ.

ಬಿ. ಚಂದ್ರೇಗೌಡ, ಬೆಂಗಳೂರು

ಮದುವೆಯನ್ನು ವಿವಾಹ ಮಹೋತ್ಸವ ಎಂದು ಕರೆಯುವುದು ಸರಿಯೆ?

ಮೊದಲು ವಾಹ್ ಎನ್ನುವಂತಿದ್ದು, ನಂತರ ಹೋ ಎನ್ನುವಂತಾಗುವುದರಿಂದ, ಸರಿಯೇ.

■ ರಾಮ್

ಪ್ರಶ್ನೆ ಕಳುಹಿಸಲು: editorsu@sudha.co.in